# ತ್ಯಾಗವಿಭೂಷಿತೆ ಶ್ರೀಮಾತೆ

ಕುಮಾರಿ ಕೆ.ಎಸ್. ಚಂದ್ರಾ

*ಸರಳ ತ್ಯಾಗಮಯ ಜೀವನದಿಂದಲೆ ಶಾಂತಿ ನೆಮ್ಮದಿ ಎಂಬುದನ್ನು ಶ್ರೀಮಾತೆಯವರು ತೋರಿಸಿಕೊಟ್ಟಿರುವರು. ಮನಶ್ಶಾಸ್ತ್ರ ಉಪನ್ಯಾಸಕರೂ ಬೆಂಗಳೂರು ರಾಮಕೃಷ್ಣ ಮಠದ ಭಕ್ತರೂ ಆಗಿರುವ ಕುಮಾರಿ ಚಂದ್ರಾ ಅವರು ಶ್ರೀಮಾತೆಯವರ ತ್ಯಾಗಮಯ ಜೀವನದ ಚಿತ್ರವನ್ನು ನೀಡಿರುವರು.*

**ಶಿ**ವಮಹಾದೇವನಿಗೆ ತ್ಯಾಗಚೂಡಾಮಣಿ ಎಂದು ಹೆಸರು. ಏಕೆಂದರೆ ಶಿವಪರಮಾತ್ಮ ಬಾಹ್ಯ ಐಶ್ವರ್ಯವನ್ನು ತೊರೆದು ಕೈಲಾಸದಲ್ಲಿ ಧ್ಯಾನಮಗ್ನನಾಗಿ ಆತ್ಮಲೀನನಾಗಿ ಇರುತ್ತಾನೆ. ಶಿವನ ಶಕ್ತಿಯಾದ ಸತೀದೇವಿಯೂ ತ್ಯಾಗದಲ್ಲಿ ಏನೂ ಕಡಮೆಯಲ್ಲ. ತನಗೆ ಶಿವನೇ ಪತಿಯಾಗಬೇಕೆಂದು ರಾಜಕುಮಾರಿಯಾದ ಪಾರ್ವತಿಯು ಶಿವನನ್ನು ಒಲಿಸಿಕೊಳ್ಳಲು ಎಂತಹ ತ್ಯಾಗಕ್ಕೂ ಸಿದ್ಧಳಾಗಿ ಎಲ್ಲ ಸುಖ ಸೌಕರ್ಯಗಳನ್ನು ತ್ಯಜಿಸಿ ತಪಸ್ಸನ್ನು ಆಚರಿಸಿ ಶಿವನನ್ನು ಪಡೆದವಳು. ಭವ್ಯ ಭಾರತೀಯ ಸಂಸ್ಕೃತಿಯ ಪರಂಪರೆಯಲ್ಲಿ ತ್ಯಾಗಜೀವನಕ್ಕೆ ಹೆಸರಾದ ಮತ್ತೊಬ್ಬ ದಂಪತಿಗಳೆಂದರೆ ಶ್ರೀರಾಮ ಹಾಗೂ ಸೀತಾದೇವಿಯವರು. ಪಿತೃವಾಕ್ಯಪರಿಪಾಲನೆಗಾಗಿ ವನವಾಸ ಮಾಡಿದ ಶ್ರೀರಾಮನನ್ನು ಪತಿವ್ರತೆಯಾದ ಸೀತಾದೇವಿಯು ಅನುಸರಿಸಿದ್ದು ಆಶ್ಚರ್ಯವೇನಲ್ಲ. ರಾಮನೊಂದಿಗೆ ತಾನೂ ಕಾಡಿಗೆ ಹೋಗಲು ಸೀತೆಯು ಕೊಡುವ ವಿವರಣೆ ರಾಮಾಯಣದಲ್ಲಿ ಒಂದು ಮುಖ್ಯ ಘಟ್ಟವಾಗಿದೆ. ಸೀತಾದೇವಿಯ ತ್ಯಾಗವು ಎಷ್ಟು ಅದ್ಭುತವೆಂದರೆ ಕೆಲವು ಕವಿಗಳು ರಾಮಾಯಣವನ್ನು ಸೀತಾ ಚರಿತ್ರೆ ಎಂದೇ ಕರೆಯಬಹುದು ಎಂದು ಅಭಿಪ್ರಾಯಪಡುತ್ತಾರೆ.

ಭಾರತದ ಭವ್ಯಪರಂಪರೆಗೆ ಅನುಗುಣವಾಗಿ ರಾಮಕೃಷ್ಣಾವತಾರದಲ್ಲಿ ಶ್ರೀರಾಮಕೃಷ್ಣರು ಅಸಂಖ್ಯ ಭಕ್ತರ ಹೃತ್ಕಮಲದಲ್ಲಿ ವಾಸಿಸುತ್ತಿರುವುದು ಶ್ರೀಮಾತೆ ಶಾರದಾದೇವಿಯವರ ಅಸದೃಶ ತ್ಯಾಗಮಯ ಜೀವನದಿಂದ. ಪರಬ್ರಹ್ಮ ಹಾಗೂ ಪರಾಶಕ್ತಿಗಳದು ಅವಿನಾಭಾವಸಂಬಂಧ. ಹೀಗಾಗಿ ಶ್ರೀರಾಮಕೃಷ್ಣರಲ್ಲಿ ಕಂಡುಬರುವ ಎಲ್ಲ ದಿವ್ಯಗುಣಗಳೂ ಶ್ರೀಮಾತೆಯವರಲ್ಲೂ ಕಂಡುಬರುವುವು. ಶ್ರೀರಾಮಕೃಷ್ಣರ ದಿವ್ಯವ್ಯಕ್ತಿತ್ವದಲ್ಲಿ ಪ್ರಧಾನವಾಗಿ ಕಂಡುಬರುವ ತ್ಯಾಗವು ಶ್ರೀಮಾತೆಯವರ ವ್ಯಕ್ತಿತ್ವದಲ್ಲೂ ಸಹ ಉತ್ಕೃಷ್ಟರೀತಿಯಲ್ಲಿ ಅಭಿವ್ಯಕ್ತವಾಗಿದೆ.

ತ್ಯಾಗ ಎನ್ನುವುದು ಸಾಧಾರಣವಾಗಿ ಎಲ್ಲರಲ್ಲೂ ಕಾಣಸಿಗದ ಗುಣ. ಇದೊಂದು ಅದ್ಭುತವಾದ ಗುಣ. ತ್ಯಾಗ ಎಂಬ ಪದದ ಅರ್ಥ ಕೇವಲ ಬಿಡುವುದು ಅಥವಾ ತ್ಯಜಿಸುವುದು ಎಂಬುದಕ್ಕೆ ಮಾತ್ರ ಸೀಮಿತವಾಗಿರದೆ ಅನೇಕ ವೇಳೆ ಆ ಗುಣದ ಮತ್ತೊಂದು ಮುಖವಾದ ವಾತ್ಸಲ್ಯದ ಮೂಲಕ ವ್ಯಕ್ತವಾಗುತ್ತದೆ. ವಿಸ್ತಾರವಾದ ಅರ್ಥದಲ್ಲಿ ತ್ಯಾಗವೆಂದರೆ ಅಹಂಕಾರದ ಸಂಪೂರ್ಣ ನಾಶವೆಂದು ತಿಳಿಯಬಹುದು. ತ್ಯಾಗ ಮಾಡುವ ಗುಣ ಮಹಾಪುರುಷರಲ್ಲಿ ಸಹಜ ಗುಣವಾಗಿರುವುದನ್ನು ನಾವು ನೋಡಬಹುದು. ಉಪನಿಷತ್ತುಗಳೂ ಸಹ ತ್ಯಾಗದ ಹಿರಿಮೆಯನ್ನು ಸಾಕಷ್ಟು ಹೊಗಳಿವೆ. **ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವಮಾನಶುಃ** ಎಂಬ ಉಪನಿಷತ್ ವಾಕ್ಯವು ಪ್ರಸಿದ್ಧವಾದದ್ದು. ಇದರ ಅರ್ಥ—"ಕರ್ಮದಿಂದಾಗಲೀ, ಸಂತಾನದಿಂದಾಗಲೀ, ಧನದಿಂದಾಗಲೀ, ಅಮೃತತ್ವವನ್ನು ಪಡೆಯಲಾಗದು. ಅದು ತ್ಯಾಗದಿಂದ ಮಾತ್ರ ಸಾಧ್ಯ" ಎಂದು.

ನಮ್ಮ ಸ್ವಂತದ್ದೆಂದು ನೆಚ್ಚಿಕೊಂಡುದಾವುದೂ ಸಾವಿನ ನಂತರ ನಮ್ಮೊಂದಿಗೆ ಬರುವುದಿಲ್ಲ. ಆದರೂ ಜನರು ಈ ಸರಳ ಸತ್ಯವನ್ನು ಅರ್ಥಮಾಡಿಕೊಳ್ಳುವುದಿಲ್ಲವಲ್ಲ!

—*ಶ್ರೀಶಾರದಾದೇವಿ*

ಪ್ರಸಿದ್ಧ ಮನೋವಿಜ್ಞಾನಿಯಾದ ಮಾಸ್ಲೋ ಪ್ರಕಾರ ಸೃಜನಶೀಲತೆ, ದಯೆ, ತ್ಯಾಗ ಮನೋಭಾವ... ಇವೆಲ್ಲವೂ ಅತ್ಯಂತ ವಿಕಾಸಹೊಂದಿದ ಆತ್ಮಸಿದ್ಧಿಯನ್ನು ಪಡೆದಿರುವ ವ್ಯಕ್ತಿಯ ಗುಣಗಳು.

ಶ್ರೀಮಾತೆಯವರ ಜೀವನವೇ ಒಂದು ಮಹಾಯಜ್ಞ, ಒಂದು ಮಹಾತ್ಯಾಗ. ಯಾವ ಮಹಾಕಾರ್ಯವೂ ಮಹಾತ್ಯಾಗವಿಲ್ಲದೆ ಸಿದ್ಧಿಸದು. ರಾಮಕೃಷ್ಣ ಮಹಾಸಂಘದ ಸ್ಥಾಪನೆ, ಪಾಲನೆ, ಪೋಷಣೆ ಇವೆಲ್ಲವೂ ಮಹಾಮಾತೆಯಾದ ಶ್ರೀಶಾರದಾದೇವಿಯವರ ಮಹಾತ್ಯಾಗಮಯ ಜೀವನದಿಂದ ರೂಪಿಸಲ್ಪಟ್ಟು, ಅವ್ಯಾಹತವಾಗಿ ಸಾಗುತ್ತಿರುವುದು. ಶ್ರೀಮಾತೆಯವರ ಅಸದೃಶ ತ್ಯಾಗಮಯ ಪವಿತ್ರ ಜೀವನವನ್ನು ಕೇಂದ್ರವಾಗಿಟ್ಟುಕೊಂಡು ಇಂದು ಭಾರತದಾದ್ಯಂತ ಹಾಗೂ ಪ್ರಪಂಚದ ಕೆಲವೆಡೆ ಸ್ಥಾಪಿಸಲ್ಪಟ್ಟಿರುವ ಸಂನ್ಯಾಸಿನಿಯರ ಸಂಘವಾದ ಶ್ರೀಶಾರದಾ ಮಠವೂ ಈ ಮಹಾತ್ಯಾಗದ ಫಲ.

ಶ್ರೀಮಾತೆಯವರದು ಚಿಕ್ಕಂದಿನಿಂದಲೇ ತ್ಯಾಗದಿಂದ ಬೆಳಗುತ್ತಿದ್ದ ಜೀವನ. ಶ್ರೀಶಾರದಾದೇವಿಯವರು ಹಿರಿಯ ಮಗಳಾದ್ದರಿಂದ ಅವರು ತಮ್ಮ ಕಿರಿಯ ಸೋದರರನ್ನು ತಮ್ಮ ಮಕ್ಕಳ ಹಾಗೆಯೇ ನೋಡಿಕೊಂಡರು. ಓದು ಬರಹದಲ್ಲಿ ಆಸಕ್ತಿವಹಿಸಿ ಸ್ವಯಂ ತಾವೇ ಕಲಿಯಲು ಪ್ರಯತ್ನಪಟ್ಟು ವಿದ್ಯೆಯ ಪ್ರಾಮುಖ್ಯವನ್ನು ಆಳವಾಗಿ ಮನಗಂಡಿದ್ದರು. ತಾವು

ಶಾಲೆಗೆ ಹೋಗಲಾಗದಿದ್ದರೂ ತಮ್ಮಂದಿರನ್ನು ಶಾಲೆಗೆ ಕರೆದು ಕೊಂಡು ಹೋಗುತ್ತಿದ್ದರು.

ಶ್ರೀರಾಮಕೃಷ್ಣರೊಂದಿಗೆ ಅವರ ವಿವಾಹವಾದದ್ದು ಒಂದು ಅಪೂರ್ವ ಘಟನೆ. ಬಾಲವಧುವಾದ ಶ್ರೀಶಾರದಾದೇವಿಯವರು ಆಧ್ಯಾತ್ಮಿಕತೆಯ ಉತ್ತುಂಗವನ್ನು ತಲುಪಿದ ಶ್ರೀರಾಮಕೃಷ್ಣರ ಕೈಹಿಡಿದದ್ದೇ ಒಂದು ಅದ್ಭುತ ಪ್ರಸಂಗ. ಶ್ರೀರಾಮಕೃಷ್ಣರು ಶ್ರೀಶಾರದಾದೇವಿಯವರನ್ನು ಕೇಳುತ್ತಾರೆ, "ನಿನಗೆ ನನ್ನನ್ನು ಪ್ರಾಪಂಚಿಕ ಜೀವನಕ್ಕೆ ಎಳೆಯುವ ಮನಸ್ಸಿದೆಯೇನು?" ಎಂದು. ಅದಕ್ಕೆ ಶಾರದಾದೇವಿಯವರಿಂದ ತಕ್ಷಣ ಉತ್ತರ ಬಂತು: "ನಾನೇಕೆ ಹಾಗೆ ಮಾಡಲಿ? ನಾನು ಬಂದಿರುವುದು ನಿಮ್ಮ ಧಾರ್ಮಿಕ ಜೀವನದಲ್ಲಿ ನೆರವಾಗುವುದಕ್ಕೆ." ಶ್ರೀಮಾತೆಯವರ ಮನಸ್ಸು ಎಂತಹ ಎತ್ತರಸ್ತರದಲ್ಲಿ ವಿಹರಿಸುತ್ತಿತ್ತು ಎನ್ನುವುದಕ್ಕೆ ಈ ಉತ್ತರವೊಂದೇ ಸಾಕು. ಶ್ರೀಮಾತೆಯವರು ಇತರ ಸ್ತ್ರೀಯರಂತೆ ಸಾಂಸಾರಿಕ ಜೀವನದ ಬಯಕೆಯನ್ನು ಬಯಸದೆ, ತಾವು ಬುವಿಗೆ ಬಂದಿರುವ ಉದ್ದೇಶದ ಪೂರೈಕೆಗಾಗಿ ಅಣಿಯಾಗುವುದನ್ನು ಕಾಣಬಹುದು. ಸ್ತ್ರೀಸಹಜವಾದ ತಾಯ್ತನದ ಬಯಕೆಯನ್ನು ಉದಾತ್ತೀಕರಿಸಿ ಜಗನ್ಮಾತೃತ್ವಕ್ಕೆ ಏರಿಸಿದ ಸಂಗತಿಯಂತು ಅವರ ದಿವ್ಯ ವ್ಯಕ್ತಿತ್ವದ ವಿಶೇಷ ಅಂಶವೇ ಆಗಿದೆ.

ಶ್ರೀಮಾತೆಯವರು ದಕ್ಷಿಣೇಶ್ವರದಲ್ಲಿ ನಹಬತ್‌ಖಾನೆ ಯೆಂಬ ಒಂದು ಸಣ್ಣ ಕೋಣೆಯಲ್ಲಿರುತ್ತಿದ್ದರು. ಅದೇ ಅವರ ಅಡುಗೆಯ ಮನೆ, ಮಲಗುವ ಮನೆ, ಸಾಲದ್ದಕ್ಕೆ ಗೋಲಾಪ್ ಮಾ, ಗೌರೀಮಾ ಮೊದಲಾದ ಭಕ್ತೆಯರು ಬಂದಾಗ ಅವರಿಗೂ ಅಲ್ಲಿ ತಂಗಲು ಸ್ಥಳಾವಕಾಶ ಮಾಡಿಕೊಡುತ್ತಿದ್ದರು. ಬೆಳಗ್ಗೆ ಮೂರು ಗಂಟೆಯಿಂದ ರಾತ್ರಿ ತುಂಬ ಹೊತ್ತಿನವರೆಗೆ ಶ್ರೀಮಾತೆಯವರು ಒಂದಲ್ಲ ಒಂದು ಕೆಲಸದಲ್ಲಿ ತೊಡಗಿ ತಮ್ಮ ಮೌನ, ತ್ಯಾಗಮಯ ಜೀವನದಿಂದ ಅಲ್ಲಿ ಪ್ರಖರವಾಗಿದ್ದ ಆಧ್ಯಾತ್ಮಿಕ ವಾತಾವರಣಕ್ಕೆ ಕಾರಣವಾಗಿದ್ದರು.

ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರು ತಮ್ಮ ಕೊಠಡಿಯಲ್ಲಿ ಭಕ್ತರೊಂದಿಗೆ ನಡೆಸುತ್ತಿದ್ದ ಆಧ್ಯಾತ್ಮಿಕ ಸಂಭಾಷಣೆಯನ್ನಾಗಲಿ, ಸತ್ಸಂಗವನ್ನಾಗಲಿ ಮಾತೆಯವರು ನೇರವಾಗಿ ನೋಡಲಾಗುತ್ತಿರಲಿಲ್ಲ. ಕಾರಣ ಶ್ರೀರಾಮಕೃಷ್ಣರಿಗೆ ಮಾತ್ರವಲ್ಲದೆ ಅವರನ್ನು ನೋಡುವ ಭಕ್ತಾದಿಗಳ ಊಟೋಪಚಾರದ ಸಲುವಾಗಿ ಒಂದು ಕ್ಷಣವೂ ಬಿಡುವಿರದ ನಿರಂತರ ಕೆಲಸಗಳಿರುತ್ತಿದ್ದುವು. ಇಂತಹ ಅದ್ಭುತವಾದ ತ್ಯಾಗವು ಮಹಾಮಾತೆಯಿಂದ ಮಾತ್ರ ಸಾಧ್ಯ. ಅಂದಿನ ದಿನಗಳನ್ನು ನೆನಪಿಸಿಕೊಂಡು ಶ್ರೀಮಾತೆಯವರು ನುಡಿಯುತ್ತಾರೆ, "ಆಹಾ! ನಾನೆಂಥ ಆನಂದದಿಂದಿದ್ದೆ! ನನ್ನ ಹೃದಯದಲ್ಲಿ ಅಮೃತ ಕಲಶವಿಟ್ಟಂತೆ ಭಾಸವಾಗುತ್ತಿತ್ತು" ಎಂದು.

ಶ್ರೀಮಾತೆಯವರು ಶ್ರೀರಾಮಕೃಷ್ಣರನ್ನು ನೋಡುವುದು ಹಾಗೂ ಅವರೊಂದಿಗೆ ಮಾತನಾಡುವುದು ಎಂದರೆ ಅವರಿಗೆ ಊಟವನ್ನು ತೆಗೆದುಕೊಂಡು ಹೋದಾಗ ಮಾತ್ರ. ಆದರೆ ಈ ಅವಕಾಶವನ್ನೂ ಅವರಿಂದ ಕೆಲವೊಮ್ಮೆ ಬೇರೆಯವರು ಕಸಿದುಕೊಳ್ಳುತ್ತಿದ್ದರು. ಒಮ್ಮೆ ಹೆಂಗಸೊಬ್ಬಳು ಶ್ರೀರಾಮಕೃಷ್ಣರಿಗೆ ತಾನು ಊಟ ತೆಗೆದುಕೊಂಡುಹೋಗುವುದಾಗಿ ಅಂಗಲಾಚಿ ಬೇಡಿಕೊಂಡಳು. ಶ್ರೀಶಾರದಾದೇವಿಯವರು ಅದಕ್ಕೆ ಒಪ್ಪಿ, ಅವಳ ಕೈಗೆ ತಟ್ಟೆ ಕೊಟ್ಟರು. ಆದರೆ ಆಕೆಯ ಕೈಯಿಂದ ಶ್ರೀರಾಮಕೃಷ್ಣರಿಗೆ ಊಟಮಾಡಲಾಗಲಿಲ್ಲ. ಶ್ರೀರಾಮಕೃಷ್ಣರು ಶ್ರೀಶಾರದಾದೇವಿಯವರಿಗೆ ಇನ್ನು ಮುಂದೆ ಯಾರ ಕೈಯಲ್ಲೂ ಈ ರೀತಿ ಊಟ ಕಳುಹಿಸುವುದಿಲ್ಲವೆಂದು ಭಾಷೆ ಕೊಡಬೇಕೆಂದು ಹೇಳಿದಾಗ ಶ್ರೀಮಾತೆಯವರು ಕೊಟ್ಟ ಉತ್ತರ ಅವರ ತ್ಯಾಗಮನೋಭಾವದ ಪರಾಕಾಷ್ಠೆಯನ್ನು ನಿರೂಪಿಸುತ್ತದೆ. ಶ್ರೀಮಾತೆಯವರು ನುಡಿದರು: "ನಾನು ಹಾಗೆ ಭಾಷೆ ಕೊಡಲಾರೆ. ಯಾರಾದರೂ ಬಂದು ನನ್ನನ್ನು 'ಅಮ್ಮಾ' ಎಂದು ಕರೆದಾಗ ನನ್ನಿಂದ ತಡೆಯಲು ಸಾಧ್ಯವಿಲ್ಲ. ನೀವು ಕೇವಲ ನನಗೆ ಮಾತ್ರ ಸೇರಿದವರಲ್ಲ, ನೀವು ಎಲ್ಲರಿಗೂ ಸೇರಿದವರು." ಶ್ರೀರಾಮಕೃಷ್ಣರು ಅವರ ತ್ಯಾಗಪೂರ್ಣ ವರ್ತನೆಯನ್ನೂ, ಮಾತನ್ನೂ ಮೆಚ್ಚಿ ಮನಸ್ಸಿನಲ್ಲೇ ಆನಂದಿಸಿದರು.

**ಪ್ರಾಪಂಚಿಕ ಸುಖ ಕ್ಷಣಿಕ. ಪ್ರಾಪಂಚಿಕ ವಿಷಯದಲ್ಲಿ ಆಸಕ್ತಿ ಕಡಮೆಯಾದಷ್ಟೂ ನೀನು ಮನಶ್ಶಾಂತಿಯನ್ನು ಹೆಚ್ಚು ಅನುಭವಿಸುವೆ. —*ಶ್ರೀಶಾರದಾದೇವಿ.***

ಒಮ್ಮೆ ಒಬ್ಬ ಮಾರ್ವಾಡಿ ಭಕ್ತ ದಕ್ಷಿಣೇಶ್ವರಕ್ಕೆ ಬಂದು ಶ್ರೀರಾಮಕೃಷ್ಣರ ಖರ್ಚಿಗಾಗಿ ಹತ್ತುಸಾವಿರ ರೂಪಾಯಿ ಕೊಡುವುದಾಗಿ ಹೇಳಿದ. ಆ ಮಾತನ್ನು ಕೇಳಿ ಶ್ರೀರಾಮಕೃಷ್ಣರಿಗೆ ಸಿಡಿಲು ಬಡಿದಂತಾಯಿತು. ಆಗ ಅವರು ಶ್ರೀಮಾತೆಯವರ ಮನಸ್ಸನ್ನು ಪರೀಕ್ಷಿಸಲು, "ನೋಡು ಈತ ನನಗೆ ಹತ್ತುಸಾವಿರ ರೂಪಾಯಿ ಕೊಡಬೇಕು ಅಂದಿದ್ದಾನೆ. ಆದರೆ ನಾನು ಬೇಡ ಅಂದದ್ದರಿಂದ ನಿನಗೆ ಕೊಡುವುದಾಗಿ ಹೇಳುತ್ತಿದ್ದಾನೆ. ನೀನೇಕೆ ತೆಗೆದುಕೊಳ್ಳಬಾರದು?" ಎಂದು ಕೇಳಿದರು. ಆಗ ಮಾತೆಯವರು ಒಡನೆಯೇ ನುಡಿದರು : "ಅದು ಹೇಗಾದೀತು? ಆ ಹಣವನ್ನು ನಾನು ತೆಗೆದುಕೊಂಡರೂ ಒಂದೇ, ನೀವು ತೆಗೆದುಕೊಂಡರೂ ಒಂದೇ. ಜನ ನಿಮ್ಮನ್ನು ಗೌರವಿಸುವುದು ನಿಮ್ಮ ತ್ಯಾಗ ವೈರಾಗ್ಯಗಳನ್ನು ನೋಡಿ. ಆದ್ದರಿಂದ ಈ ಹಣವನ್ನು ಸ್ವೀಕರಿಸುವುದಕ್ಕೆ ಸಾಧ್ಯವೇ ಇಲ್ಲ." ಈ ಉತ್ತರದಿಂದ ಶ್ರೀರಾಮಕೃಷ್ಣರಿಗೆ ಆನಂದವಾಯಿತೆಂದು ಹೇಳಬೇಕಾಗಿಯೇ ಇಲ್ಲ. ಶ್ರೀಮಾತೆಯವರು ಶ್ರೀರಾಮಕೃಷ್ಣರಿಗೆ ಅನುರೂಪಳಾದ ಸತಿಯೆಂದು ತಮ್ಮ ಈ ತ್ಯಾಗಮನೋಭಾವದಿಂದ ಮತ್ತೊಮ್ಮೆ ಸಿದ್ಧಪಡಿಸಿದರು.

ಶ್ರೀರಾಮಕೃಷ್ಣರು ಕ್ಯಾನ್ಸರ್ ಖಾಯಿಲೆಗೆ ಚಿಕಿತ್ಸೆ ಪಡೆಯುವುದಕ್ಕಾಗಿ ಶ್ಯಾಮಪುಕುರದ ಮನೆಯೊಂದರಲ್ಲಿ ಇದ್ದರು. ಆದರೆ ಆ ಮನೆಯು ತುಂಬಾ ಚಿಕ್ಕದಾಗಿದ್ದರಿಂದ ಶ್ರೀಮಾತೆಯವರು ಅಲ್ಲಿರಲು ಸಾಧ್ಯವಿಲ್ಲದೆ, ದಕ್ಷಿಣೇಶ್ವರದಲ್ಲಿಯೇ ಇರ

ಬೇಕಾಯಿತು. ಶ್ರೀರಾಮಕೃಷ್ಣರಿಗೆ ಬೇಕಾದ ಪಥ್ಯದ ಆಹಾರವನ್ನು ತಯಾರುಮಾಡಿಕೊಡಲು ಶ್ರೀಮಾತೆಯವರನ್ನು ಕರೆತರಲಾಯಿತು. ಲಜ್ಜಾಪಟಾವೃತರಾದ ಶ್ರೀಮಾತೆಯವರು ಪುರುಷ ಭಕ್ತರು ಇದ್ದ ಆ ಮನೆಗೆ ಬಂದರು. ತಮ್ಮ ಅಪೂರ್ವ ತ್ಯಾಗೀ ಗುಣದಿಂದ ಎಲ್ಲ ಕಷ್ಟವನ್ನೂ ಸಹಿಸಿಕೊಂಡು ಆ ಮನೆಯ ತಾರಸಿಯ ಮೇಲೆ ಪಥ್ಯದ ಆಹಾರವನ್ನು ತಯಾರಿಸುತ್ತಿದ್ದರು. ತಾವೇ ಶ್ರೀರಾಮಕೃಷ್ಣರಿಗೆ ಊಟವನ್ನು ಕೊಟ್ಟು ಶುಶ್ರೂಷೆ ಮಾಡಿದರು. ರಾತ್ರಿ ಎಲ್ಲರೂ ಮಲಗಿದನಂತರ, ಅಂದರೆ, ಸುಮಾರು ಹನ್ನೊಂದು ಗಂಟೆಗೆ ತಮ್ಮ ಕೋಣೆಗೆ ಬಂದು ಮಲಗಿಕೊಳ್ಳುತ್ತಿದ್ದರು. ಇಷ್ಟೆಲ್ಲಾ ಕೆಲಸ ಮಾಡುತ್ತಿದ್ದರೂ, ಎಷ್ಟೋ ಜನರಿಗೆ ಅವರು ಅಲ್ಲಿರುವುದೇ ಗೊತ್ತಾಗುತ್ತಿರಲಿಲ್ಲ.

ಶ್ರೀರಾಮಕೃಷ್ಣರ ನಿರ್ಯಾಣದ ನಂತರ ರಾಮಲಾಲನ ಪಿತೂರಿಯಿಂದ ದಕ್ಷಿಣೇಶ್ವರ ಕಾಳೀ ದೇವಾಲಯದಿಂದ ರಾಮಕೃಷ್ಣರಿಗೆ ಕೊಡುತ್ತಿದ್ದ ಹಣ ಶ್ರೀಮಾತೆಯವರಿಗೆ ದೊರಕದೆ ಹೋಯಿತು. ಈ ವಿಷಯವಾಗಿ ನರೇಂದ್ರ ಮತ್ತು ಇತರ ಯುವಭಕ್ತರು ದೇವಾಲಯದ ಆಡಳಿತಗಾರರೊಂದಿಗೆ ಸಾಕಷ್ಟು ಕಾದಾಡಿದರು. ಆದರೂ ಏನೂ ಫಲಕಾರಿಯಾಗಲಿಲ್ಲ. ಶ್ರೀಮಾತೆಯವರಿಗೆ ಈ ವಿಷಯ ತಿಳಿದು "ಅವರು ಅದನ್ನು ನಿಲ್ಲಿಸಿದರೆ ನಿಲ್ಲಿಸಲಿ ಬಿಡಿ. ಅಂಥಾ ಶ್ರೀರಾಮಕೃಷ್ಣರೇ ಹೋಗಿಬಿಟ್ಟರು. ಈಗ ಈ ಹಣದಿಂದ ಏನಾಗಬೇಕಾಗಿದೆ?" ಎಂದು ನಿರ್ಲಿಪ್ತ ಭಾವದಿಂದ ನುಡಿದರು. ಇದು ಅವರ ಅನಾಸಕ್ತಿಯನ್ನು ತೋರಿಸುತ್ತದೆ.

ಇದಾದಮೇಲೆ ಶ್ರೀಮಾತೆಯವರು ಕಾಮಾರಪುಕುರದಲ್ಲಿ ಅತ್ಯಂತ ಕಷ್ಟಮಯಜೀವನವನ್ನು ನಡೆಸಿದರು. ಜಗನ್ಮಾತೆಯಾದ ಶ್ರೀಶಾರದಾದೇವಿಯವರು ಅನೇಕದಿನ ಬರಿಯ ಅನ್ನ, ಸೊಪ್ಪನ್ನು ಉಪ್ಪೂ ಸಹ ಇಲ್ಲದೆಯೇ ಸೇವಿಸಬೇಕಾಯಿತು. ಎಷ್ಟೋ ದಿನ ತಮ್ಮ ಹರಿದ ಸೀರೆಗೆ ಗಂಟುಹಾಕಿ ಉಪಯೋಗಿಸುತ್ತಿದ್ದರು. ಆದರೂ ಒಮ್ಮೆಯಾದರೂ ಯಾರ ಸಹಾಯವನ್ನೂ ಅಪೇಕ್ಷಿಸಲಿಲ್ಲ. ಅದ್ಭುತವಾದ ತ್ಯಾಗೀ ಜೀವನವನ್ನು ನಡೆಸಿ ಮಹೋನ್ನತ ಧ್ಯೇಯಕ್ಕಾಗಿ ಎಲ್ಲವನ್ನೂ ತ್ಯಾಗ ಮಾಡಲು ಮಹಾತ್ಮರು ಹೇಗೆ ಸಿದ್ಧರಿರುತ್ತಾರೆ ಎಂಬುದನ್ನು ತೋರಿಸಿಕೊಟ್ಟರು.

ಹಣ ಆಭರಣ ಇವುಗಳ ವಿಷಯದಲ್ಲಿ ಶ್ರೀರಾಮಕೃಷ್ಣರ ಭಾವವೇ ಬೇರೆ, ಶ್ರೀಮಾತೆಯವರದೇ ಬೇರೆ. ಶ್ರೀಮಾತೆಯವರು ಅದು ಕೈಗೆ ಬಂದಾಗ ತಲೆಗೆ ಮುಟ್ಟಿಸಿಕೊಳ್ಳುತ್ತಿದ್ದರು. ಈ ವಿಷಯದಲ್ಲಿ ಶ್ರೀರಾಮಕೃಷ್ಣರು ಭಿನ್ನ ರೀತಿಯಲ್ಲಿ ವರ್ತಿಸುತ್ತಿದ್ದುದನ್ನು ಪ್ರಸ್ತಾಪಿಸಿದಾಗ ಅವರು ಹೇಳುತ್ತಿದ್ದರು, "ನಾನೆಲ್ಲಿ, ಅವರೆಲ್ಲಿ! ನಾನೊಬ್ಬಳು ಸಾಮಾನ್ಯ ಹೆಂಗಸು. ಠಾಕೂರರು ನನಗೆ ಚಿನ್ನದ ಆಭರಣವನ್ನು ತೊಡಿಸಿದರು" ಎಂದು. ಶ್ರೀಮಾತೆಯವರು ಹಣವನ್ನು ಲಕ್ಷ್ಮಿಯೆಂದು ಗೌರವಿಸುತ್ತಿದ್ದರು. ಆದರೂ ಅದರಲ್ಲಿ ಆಸಕ್ತಿ ಇರಲಿಲ್ಲ. ಈ ಅನಾಸಕ್ತಿ ಅವರಿಗೆ ಸ್ವಾಭಾವಿಕವಾಗಿತ್ತು. ಶ್ರೀರಾಮಕೃಷ್ಣರು ತಮ್ಮ ಮರಣಾನಂತರ ಶ್ರೀಮಾತೆಯವರ ಖರ್ಚಿಗಿರಲೆಂದು ಇನ್ನೂರು ರೂಪಾಯಿಗಳನ್ನು ಅವರಿಗೆ ಕೊಟ್ಟಿದ್ದರು. ಅವರದನ್ನು ಬಟ್ಟೆಯಲ್ಲಿ ಸುತ್ತಿ ಮಸಾಲೆ ಪೆಟ್ಟಿಗೆಯಲ್ಲಿ ಇಟ್ಟಿದ್ದರು. ಶ್ರೀರಾಮಕೃಷ್ಣರಿಗೆ ಇದು ತಿಳಿದುಬಂದು "ದುಡ್ಡನ್ನು ಹಾಗೆ ಇಡುವುದೇ" ಎಂದು ಎಚ್ಚರಿಸಿದ್ದರು. ಈ ವಿಷಯವನ್ನು ಸೇವಕರಿಗೆ ತಿಳಿಸಿ ನಸುನಕ್ಕು ಹೇಳುತ್ತಿದ್ದರು, "ಈಗ ನೋಡು, ಅವರ ಇಚ್ಛೆಯಿಂದ ಎಷ್ಟು ದುಡ್ಡು ಬರುತ್ತೆ ಹೋಗುತ್ತೆ!"

> ನಾನು ಇವೆಲ್ಲವುಗಳ ನಡುವೆ ಇದ್ದೇನೆ. ಆದರೆ ನನಗೆ ಇವಾವುದರಲ್ಲಿಯೂ ಆಸಕ್ತಿಯಿಲ್ಲ, ಇಲ್ಲ, ಸ್ವಲ್ಪವೂ ಇಲ್ಲ.
> —ಶ್ರೀಶಾರದಾದೇವಿ.

ಈ ರೀತಿ ಬಂದುಹೋಗುತ್ತಿದ್ದ ಹಣಕ್ಕೆ ಅವರು ಕೇವಲ ಸಾಕ್ಷಿಯಾಗಿದ್ದರಷ್ಟೆ. ಮೊದಮೊದಲು ಅವರು ಪ್ರಣಾಮೀ ಹಣವನ್ನು (ಪ್ರಣಾಮದ ಸಮಯದಲ್ಲಿ ಭಕ್ತರು ಕೊಡುವ ಕಾಣಿಕೆ) ಮುಟ್ಟುತ್ತಲೂ ಇರಲಿಲ್ಲ. ಗೋಲಾಪ್-ಮಾ ಮತ್ತಿತರರು ಅದರ ವ್ಯವಸ್ಥೆ ನೋಡಿಕೊಳ್ಳುತ್ತಿದ್ದರು. ಮುಂದೆ ಅವರ ಸಂಸಾರ ಬೆಳೆಯಿತು, ಅವರೇ ಎಲ್ಲವನ್ನೂ ನೋಡಿಕೊಳ್ಳಬೇಕಾಯಿತು. ಅವರಿಗೆ ನಾಣ್ಯಗಳ ಝಣಝಣ ಶಬ್ದ ಸ್ವಲ್ಪವೂ ಹಿಡಿಸುತ್ತಿರಲಿಲ್ಲ. "ದುಡ್ಡಿನ ಶಬ್ದ ಕೇಳಿಯೇ ಬಡವನ ಮನಸ್ಸಿನಲ್ಲಿ ಲೋಭ ಉಂಟಾಗುವುದು" ಎನ್ನುತ್ತಿದ್ದರು. ಹಣ ಒಂದು ಪೆಟ್ಟಿಗೆಯಲ್ಲಿರುತ್ತಿತ್ತು, ಅದಕ್ಕೆ ಲೆಕ್ಕಪತ್ರ ಏನೂ ಇಲ್ಲ. ಅವರು ಸೇವಕರಾರಿಗಾದರೂ ಬೀಗದಕೈ ಕೊಟ್ಟು, ಎಷ್ಟು ಬೇಕಾದರೂ ಹಣ ತೆಗೆದುಕೊಳ್ಳಲು ಹೇಳುತ್ತಿದ್ದರು, ಅಥವಾ ತಾವೇ ಪೆಟ್ಟಿಗೆ ತೆರೆದು, "ಇಲ್ಲಿದೆ, ತೆಗೆದುಕೊಂಡುಹೋಗು" ಎನ್ನುತ್ತಿದ್ದರು. ಪೇಟೆಯ ಕೆಲಸವಾದ ಮೇಲೆ ಉಳಿದ ಹಣ ಹಿಂತಿರುಗಿಸಿದಾಗ ಅದನ್ನು ಎಣಿಸದೆಯೇ ಪೆಟ್ಟಿಗೆಗೆ ಹಾಕುತ್ತಿದ್ದರು. ಕೆಲವೊಮ್ಮೆ ತಾವೇ ಪದಾರ್ಥಗಳನ್ನು ಕೊಂಡುಕೊಳ್ಳುತ್ತಿದ್ದರು. ಜಯರಾಂಬಾಟಿಯಲ್ಲಿ ಒಬ್ಬಳು ಹೆಂಗಸು ಮನೆಮನೆಗೆ ತರಕಾರಿ ತಂದು ಕೊಡುತ್ತಿದ್ದಳು. ಅದನ್ನು ಕೊಂಡುಕೊಂಡಾದ ಮೇಲೆ ಶ್ರೀಮಾತೆಯವರು ಮುಷ್ಟಿಯಲ್ಲಿ ಹಣ ತೆಗೆದು ಅವಳ ಮುಂದೆ ಚಾಚುತ್ತಿದ್ದರು. ಅವಳು ಬೆಲೆಗೆ ತಕ್ಕಂತೆ ಹಣ ತೆಗೆದುಕೊಳ್ಳಬೇಕಿತ್ತು.

ಸಾಕ್ಷಾತ್ ಭಗವಾನ್ ಶ್ರೀರಾಮಕೃಷ್ಣರ ಶಕ್ತಿಯಾಗಿ ಭೂಮಿಗೆ ಅವತರಿಸಿದ ಮಹಾಮಾತೆಯವರು ಜಗತ್ತಿಗೆ ನೀಡಿದ ಮಹೋನ್ನತ ಉಪದೇಶವೆಂದರೆ ತ್ಯಾಗವೇ ಆಧ್ಯಾತ್ಮಿಕ ಜೀವನಕ್ಕೆ ಅಡಿಪಾಯ. ಮಹಾಮಾತೆಯ ಜೀವನವು ಒಂದು ಹಣತೆಯಂತೆ. ಮೌನವಾಗಿ ತನ್ನ ಸುತ್ತಲಿನ ಕತ್ತಲನ್ನು ಬೆಳಗುವುದು. ಇದರಲ್ಲಿ ಪ್ರಖರತೆ ಇಲ್ಲ. ಆದರೆ ಹಿತವಾದ ಬೆಳಕಿದೆ. ಶ್ರೀಮಾತೆಯವರ ಜೀವನದಿಂದ ಸ್ಫೂರ್ತಿ ಪಡೆಯುವವರೇ ಧನ್ಯರು. ಶ್ರೀಮಾತೆಯ ಕೃಪೆಗಾಗಿ ಪ್ರಾರ್ಥಿಸೋಣ.

❖